ಟ್ರಸ್ಟಿಗಳನ್ನು ನೇಮಕ ಮಾಡಲು ನೋಂದಾಯಿತ ಟ್ರಸ್ಟ್ ನಿಯಮಗಳಲ್ಲಿ ಅವಕಾಶವಿಲ್ಲದಿರುವುದರಿಂದ ಈ ಪ್ರಸ್ತಾಪವು ಸರ್ಕಾರದ ಮುಂದಿರುವುದಿಲ್ಲ.

ತೋಟಗಾರಿಕೆ ಇಲಾಖೆಯ ಯೋಜನೆಗಳು

973 (1262) ಶ್ರೀ ಡಾ॥ ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10 ನೇ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಇಲಾಖೆಯ Kolar Horticulture College, Horticulture Department (SCP) ಈ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಈ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಎಷ್ಟು; ವಿವರ ನೀಡುವುದು;

ಇ) ವೆಚ್ಚ ಮಾಡದೇ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು)?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ರೂ.500.00 ಲಕ್ಷಗಳು.

ಆ) ರೂ.375.00 ಲಕ್ಷಗಳು.

ಈ ಮೊತ್ತದಲ್ಲಿ ಮಹಾವಿದ್ಯಾಲಯ ಪ್ರಾರಂಭಿಸಲು ವೆಚ್ಚ ಭರಿಸಲಾಗಿದೆ ಮತ್ತು ಮುಖ್ಯ ಕಟ್ಟಡ ಹಾಗೂ ವಿದ್ಯಾರ್ಥಿ ವಸತಿ ಕಟ್ಟಡಗಳನ್ನು ನಿರ್ಮಿಸಲು ಟೆಂಡರ್ ಕರೆಯಲಾಗಿದೆ.

ಇ) ರೂ.175.00 ಲಕ್ಷಗಳು ಉಳಿದಿದೆ ಈ ಮೊತ್ತವನ್ನು ಕಟ್ಟಡ ಕಾಮಗಾರಿಗಳಿಗೆ ವಿನಿಯೋಗಿಸಲಾಗುವುದು.

ಕೃಷಿ ಇಲಾಖೆಯ ಯೋಜನೆಗಳು

974 (1263) ಶ್ರೀ ಡಾ. ಮಹದೇವಪ್ಪ ಹೆಚ್. ಸಿ (ಟಿ. ನರಸೀಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10 ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಇಲಾಖೆಯ Enrichment of soil fertility, subsidy for crop loan, tribal Area

sub Plan, Special Component Plant Karnataka Agricultural Mission ಈ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಈ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಎಷ್ಟು (ವೆಚ್ಚದ ವಿವರ ನೀಡುವುದು);

ಇ) ವೆಚ್ಚ ಮಾಡದೇ ಉಳಿದಿರುವ ಮೊತ್ತವೆಷ್ಟು?

ಶ್ರೀ ಎಸ್. ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಆ) ಮತ್ತು ಇ)

2009–10 ನೇ ಸಾಲಿನ ಆಯವ್ಯಯದ ವಿವರಗಳು, ಬಿಡುಗಡೆಯಾದ ಮೊತ್ತದ ವಿವರಗಳು, ವೆಚ್ಚದ ವಿವರ ಹಾಗೂ ಫೆಬ್ರುವರಿ–2010 ಅಂತ್ಯದವರೆಗೆ ಉಳಿದಿರುವ ಮೊತ್ತದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

Annexure

2009–10ನೇ ಸಾಲಿನಲ್ಲಿ ವಿವಿಧ ಯೋಜನಗಳಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳು.

(ಮೊತ್ತ ಲಕ್ಷ ರೂ.ಗಳಲ್ಲಿ)

ಕ್ರ ಸಂ.	ಯೋಜನೆ	ಒದಗಿಸಲಾದ ಅನುದಾನ	ಬಿಡುಗಡೆಯಾದ ಅನುದಾನ	ಫೆಬ್ರವರಿ 2010ರ ಅಂತ್ಯಕ್ಕೆ ಭರಿಸಿರುವ ವೆಚ್ಚ	ಉಳಿಕೆ ಮೊತ್ತ
1	Enrichment of Soil Fertility ಮಣ್ಣಿನ ಸತ್ವ ಹೆಚ್ಚಿಸುವಿಕೆ	4000.00	2500.00	475.00	2025.00
2	Subsidy for Croploan ಬೆಳೆ ಸಾಲಕ್ಕೆ ಸಹಾಯಧನ	25000.00	–	–	–
3	Tribal area sub plan	4033.60	3033.60	2898.62	134.98

	ಗಿರಿಜನ ಉಪಯೋಜನೆ				
4	Special component plan ವಿಶೇಷ ಘಟಕ ಯೋಜನೆ	4887.00	4887.00	4156.40	730.60
5	Karnataka Agriculture mission ಕಣ್ಣಿನ ಕೃಷಿ ಮಿಷನ್	50.00	50.00	12.41	37.59

ಲೋಕೋಪಯೋಗಿ ಯೋಜನೆಗಳು

975 (1264) ಡಾ. ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಯ Suvarna Rasthe Vikasa Jojane, Dredging, Karnataka Information Commission-Construction, Legislator's Home – works ಈ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ.

ಆ) ಈ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಎಷ್ಟು; ವೆಚ್ಚದ ವಿವರ ನೀಡುವುದು;

ಇ) ವೆಚ್ಚ ಮಾಡದೇ ಉಳಿದಿರುವ ಮೊತ್ತವೆಷ್ಟು? (ವಿವರ ನೀಡುವುದು);

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಸುವರ್ಣ ರಸ್ತೆ ವಿಕಾಸ ಯೋಜನೆ ಅಡಿ ರೂ.10000.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಕರ್ನಾಟಕ ಮಾಹಿತಿ ಆಯೋಗಕ್ಕೆ ರೂ.250.00 ಲಕ್ಷಗಳ ಅನುದಾನ ಒದಗಿಸಲಾಗಿದೆ.